# ವಿಶ್ವಶಾಂತಿಯ ಹಂಬಲ ಬಾಲಕಿಯ ಯಕ್ಷರೂಪಕ

**ಯಕ್ಷಗಾನದಲ್ಲಿ ಹೆಣ್ಣುಮಕ್ಕಳು ಕಾಣಿಸಿಕೊಳ್ಳುವುದು ಅಪರೂಪ. ತುಳಸಿ ಹೆಗಡೆ ಎನ್ನುವ ಪುಟ್ಟ ಬಾಲಕಿಯೊಬ್ಬಳು ವಿಶ್ವ ಶಾಂತಿಯ ಆಶಯದೊಂದಿಗೆ ದೇಶದ ವಿವಿಧ ಭಾಗಗಳಲ್ಲಿ ಯಕ್ಷ ರೂಪಕ ಪ್ರದರ್ಶಿಸುತ್ತಿದ್ದಾಳೆ.**

■ ವಿಜಯಾನಂದ ಬಿ. ಕಾಲವಾಡ



ತುಳಸಿ ಹೆಗಡೆ ಶಿರಸಿಯ ಬೆಟ್ಟಕೊಪ್ಪದವಳು. ಶಿರಸಿಯ ಲಯನ್ಸ್ ಶಾಲೆಯಲ್ಲಿ ಏಳನೇ ತರಗತಿಯ ವಿದ್ಯಾರ್ಥಿನಿ. ಒಂದು ಗಂಟೆಗೂ ಹೆಚ್ಚು ಕಾಲದ ಮೇಕಪ್‌ಗೆ ಹಾಗೂ ಎಂಟ್ಟತ್ತು ಕೇಜಿ ತೂಕದ ಯಕ್ಷಗಾನದ ವೇಷಭೂಷಣಕ್ಕೆ ತನ್ನನ್ನು ಒಪ್ಪಿಸಿಕೊಂಡು, ಒಂದೂವರೆ ಗಂಟೆಯ ಕಾಲ ಯಕ್ಷ ನೃತ್ಯ ಮಾಡುವ ಪ್ರತಿಭಾವಂತೆ. ಭಾರೀ ವೇಷಭೂಷಣದೊಂದಿಗೆ ಹುಡುಗಿಯೊಬ್ಬಳು ಹೀಗೆ ಕುಣಿಯುವುದು, ಪ್ರೇಕ್ಷಕರನ್ನು ಸೆಳೆಯುವುದು ಸುಲಭವಲ್ಲ.

ಕರ್ನಾಟಕ ಮಾತ್ರವಲ್ಲ, ಹೊರನಾಡಿನಲ್ಲೂ ತುಳಸಿ ಪ್ರದರ್ಶನ ನೀಡಿದ್ದಾಳೆ. ವಿಶ್ವಶಾಂತಿಯ ಸಂದೇಶ ಆಕೆಯ ಯಕ್ಷರೂಪಕದ ಉದ್ದೇಶ. ದಶಕಗಳ ಕಾಲ ಯಕ್ಷಗಾನ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಹಿರಿಯ ಕಲಾವಿದರ ದಂಡು ತುಳಸಿಯ ಪ್ರಯತ್ನಕ್ಕೆ ಬೆಂಗಾವಲಾಗಿ ನಿಂತಿದೆ.

‘ವಿಶ್ವಶಾಂತಿ ಸಂದೇಶ’ ಎಂಬ ಯಕ್ಷ ನೃತ್ಯ ರೂಪಕವನ್ನು ಪ್ರಸ್ತುತಪಡಿಸಿದಾಗ ತುಳಸಿಗೆ ಐದೂವರೆ ವರ್ಷ ವಯಸ್ಸು. ಆ ರೂಪಕವನ್ನು ವಿಶ್ವಶಾಂತಿ ಸಂದೇಶದೊಂದಿಗೆ ವಿ. ಉಮಾಕಾಂತ ಭಟ್ಟರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿತ್ತು. ತದನಂತರದಲ್ಲಿ, ಪ್ರೊ. ಎಂ.ಎ. ಹೆಗಡೆ ದಂಟ್ಕಲ್ ಅವರ ಸಾಹಿತ್ಯ ನಿರ್ದೇಶನದಲ್ಲಿ ಸತತ ಐದು ರೂಪಕಗಳು ಬಂದವು. ದೇವಗಂಗೆ–ಅಂತರಗಂಗೆ, ಬಾಹ್ಯ ಶುದ್ಧಿ–ಅಂತರಂಗ ಶುದ್ಧಿ ಆಶಯಗಳನ್ನು ಇಟ್ಟುಕೊಂಡು ‘ವಿಶ್ವ ಶಂಕರಾಕ್ಷರ’ ರೂಪಕ ರಂಗವೇರಿತು. ಒಂದೂಕಾಲು ಗಂಟೆಯ ಆ ರೂಪಕ ಅನೇಕ ಮಠಾಧೀಶರ ಗಮನವನ್ನೂ ಸೆಳೆದಿತ್ತು.

ತುಳಸಿಗೆ ಚಿಕ್ಕಂದಿನಿಂದಲೂ ಯಕ್ಷಗಾನದ ಬಗ್ಗೆ ಅಪರಿಮಿತ ಆಸಕ್ತಿ. ಒಂದೂವರೆ ವರ್ಷದ ಪುಟಾಣಿಯಾಗಿದ್ದಾಗಲೇ ಯಕ್ಷಗಾನ ಎಂದರೆ ಥೈ ಥೈ ಎನ್ನುತ್ತಿದ್ದಳು. ಯಕ್ಷಗಾನವನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದಳು. ಮೂರನೇ ವಯಸ್ಸಿನಲ್ಲಿ ಯಕ್ಷಗಾನ ವೇಷ ಕಟ್ಟುವ ಉಮೇದು. ಅಮ್ಮನೇ ಮೊದಲ ಗುರು. ಔಪಚಾರಿಕ ಶಿಕ್ಷಣ ಜಿ.ಎಸ್. ಭಟ್ಟ ಅವರಿಂದ ದೊರೆಯಿತು. ಮೂಲ ಕಲ್ಪನೆ ನೀಡುವ ರಮೇಶ ಹೆಗಡೆ, ನರ್ತನ ಸಲಹೆ ನೀಡಿದ ವಿನಾಯಕ ಹೆಗಡೆ ಕಲಗದ್ದೆ, ಗಣಪತಿ ತೋಟಿಮನೆ, ಶ್ರೀಪಾದ ಭಟ್ಟರ ಹಿನ್ನೆಲೆ ಧ್ವನಿ – ಹೀಗೆ ಅನೇಕರ ಬೆಂಬಲ ತುಳಸಿಯ ಬೆನ್ನಿಗಿದೆ. ಹಿಮ್ಮೇಳದಲ್ಲಿ ಪ್ರಸಿದ್ಧ ಭಾಗವತ ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ್, ವಿಘ್ನೇಶ್ವರ ಗೌಡ, ಪರಿಕರದಲ್ಲಿ ವೆಂಕಟೇಶ ಬೊಗ್ರಿಮಕ್ಕಿ, ವೆಂಕಟ್ರಮಣ ಹೆಗಡೆ ಹುಚ್ಚಣ್ಣಿಮನೆ ಇತರರು ಸಾಥ್ ನೀಡಿದ್ದಾರೆ.

ತುಳಸಿ ಅವರ ತಂದೆ ರಾಘವೇಂದ್ರ ಬೆಟ್ಟಕೊಪ್ಪ ಲೇಖಕರು. ಅವರ ಪ್ರೋತ್ಸಾಹವೂ ಮಗಳ ಯಕ್ಷಗಾನ ಕಲೆಗೆ ನೀರೆರೆಯುತ್ತಿದೆ.

ಆರುನೂರಕ್ಕೂ ಅಧಿಕ ಏಕವ್ಯಕ್ತಿ ಪ್ರದರ್ಶನಗಳನ್ನು ತುಳಸಿ ನೀಡಿದ್ದಾಳೆ. ಮುಂಬಯಿ, ಬೆಂಗಳೂರು, ಮಂಗಳೂರು, ಹೊಸಪೇಟೆ, ಧರ್ಮಸ್ಥಳ, ತಿರುಪತಿ ಸೇರಿದಂತೆ ದೇಶದ ವಿವಿಧೆಡೆ ಪ್ರದರ್ಶನ ನೀಡಿದ್ದಾಳೆ. ಅವಳ ಸಾಧನೆಗೆ ಗದಗದ ಕಲಾ ಚೇತನ ನೀಡುವ ಯಕ್ಷ ನಿಧಿ, ಕೊಂಕಣ ಭೂಷಣ, ದುರ್ಗಾ ಯಕ್ಷನೃತ್ಯ ಮಯೂರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನೀಡುವ ವಿಶೇಷ ಪ್ರತಿಭೆ ಪ್ರಶಸ್ತಿ, ಲಯನ್ಸ್ ಸಾಧಕಿ, ಕದಂಬ ರತ್ನ, ಉ.ಕ. ಜಿಲ್ಲಾ ಆಡಳಿತ ನೀಡುವ ಪುರಸ್ಕಾರ – ಹೀಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ■